# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ:28.02.2014ರಂದು ನಡೆದ ಸಭೆಯ ನಡವಳಿಗಳು.

| ಕ್ರ. ಸ | ಅಧ್ಯಕ್ಷರು ಹಾಗೂ ಸದಸ್ಯರು ಶ್ರೀಯುತರುಗಳಾದ | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು ಶ್ರೀಯುತರುಗಳಾದ | ಪದನಾಮ |
|---|---|---|---|---|---|
| 1 | ಎ.ಕೋದಂಡ ರೆಡ್ಡಿ | ಅಧ್ಯಕ್ಷರು | 1 | ಮಂಜುನಾಥ ಸ್ವಾಮಿ | ವಿದ್ಯಾಧಿಕಾರಿಗಳು |
| 2 | ತೇಜಸ್ವಿನಿ.ಎನ್.ರಾಜು | ಸದಸ್ಯರು | 2 | ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 3 | ಶಶಿಕಲಾ ಕೃಷ್ಣೇಗೌಡ | ಸದಸ್ಯರು | 3 | ಜಿ.ಎಸ್.ನಾಗರಾಜು | ಕ್ರೀಡಾಧಿಕಾರಿ |
| 4 | ಡಾ: ರಾಜು | ಸದಸ್ಯರು | 4 | ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 5 | ಪಿ.ಸುಗುಮಾರ್(ಸುಗುಣ್) | ಸದಸ್ಯರು | | | |
| 6 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | | | |
| 7 | ಬಿ.ಎನ್.ಕೋಕಿಲಾ | ಸದಸ್ಯರು | | | |
| 8 | ನೂರ್ ಜಹಾನ್ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು ಹಾಗೂ ಕಾರ್ಯ ಕ್ರಮದ ಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

<u>ವಿಷಯ ಸಂಖ್ಯೆ: ಶಿಸ್ಥಾಸ/10/13-14</u>

ವಿಷಯ: ಪಾಲಿಕೆಯ ಬಾಲಕರ ಪ್ರೌಢ ಶಾಲೆ ಪಿಟ್‌ಕಾಲೋನಿ ಹಾಗೂ ಪಾಲಿಕೆಯ ಪ್ರೌಢಶಾಲೆ ಮಾರಪ್ಪನಪಾಳ್ಯಗಳಲ್ಲಿ 14-15ನೇ ಸಾಲಿನಿಂದ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸುವ ಕುರಿತು.

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 1) ಶ್ರೀ.ಜಿ.ಮಂಜುನಾಥರಾಜು, ನಗರ ಪಾಲಿಕೆ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ 2) ಶ್ರೀಮತಿ.ಲಕ್ಷ್ಮೀ ಚಿಕ್ಕೇಗೌಡ, ನಗರ ಪಾಲಿಕೆ ಸದಸ್ಯರು, ವಾರ್ಡ್ ನಂ:44, ಮಾರಪ್ಪನಪಾಳ್ಯ ರವರುಗಳು ವಿಳಾಸ ಮಾಡಿರುವ ಪತ್ರಗಳನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಅರ್ಪಿಸಿದೆ.

ಶ್ರೀ.ಜಿ.ಮಂಜುನಾಥರಾಜು ರವರು ಸಲ್ಲಿಸಿರುವ ಪತ್ರದಲ್ಲಿ ನಮ್ಮ ವಾರ್ಡ್ ನಂ:65(ಕಾಡು ಮಲ್ಲೇಶ್ವರ)ರಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಾಲಕ ಪ್ರೌಢ ಶಾಲೆ ಪಿಟ್‌ಕಾಲೋನಿ, ಮಲ್ಲೇಶ್ವರಂ, ಈ ಶಾಲೆಯಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ವಿದ್ಯಾರ್ಥಿಗಳ ದಾಖಲಾತಿ ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿದೆ. ಈ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದ್ದು ಸಹ ದಾಖಲಾತಿ ಕಡಿಮೆಯಾಗಲು ಕಾರಣ ಈ ಸುತ್ತಮುತ್ತಲಿನ ಪ್ರದೇಶದ ನಾಗರೀಕರು ಭಾಷಾ ಅಲ್ಪಸಂಖ್ಯಾತರಾಗಿರುವುದರಿಂದ ಆಂಗ್ಲ ಮಾಧ್ಯಮದ ಕಡೆಗೆ ಹೆಚ್ಚಿನ ಒಲವನ್ನು ಹೊಂದಿರುತ್ತಾರೆ. ಆದ್ದರಿಂದ, ತಾವು ಈ ನಮ್ಮ ಬಿ.ಬಿ.ಎಂ.ಪಿ ಬಾಲಕರ ಪ್ರೌಢಶಾಲೆ ಪಿಟ್‌ಕಾಲೋನಿ ಶಾಲೆಯಲ್ಲಿ 2014-15ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಶ್ರೀಮತಿ.ಲಕ್ಷ್ಮೀಚಿಕ್ಕೇಗೌಡ ರವರು ಸಲ್ಲಿಸಿರುವ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು ಈ ಶಾಲೆಯಲ್ಲಿ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಲು ಮನವಿಯನ್ನು ಸಲ್ಲಿಸಿದ್ದು ಸೂಕ್ತವಾಗಿದೆ. ನಮ್ಮ ಶಾಲೆಯ ಸುತ್ತಮುತ್ತ ಯಾವುದೇ ಸರ್ಕಾರಿ ಅಥವಾ ಮಹಾನಗರ ಪಾಲಿಕೆಯ ಆಂಗ್ಲ ಮಾಧ್ಯಮ ಇಲ್ಲದಿರುವುದರಿಂದ, ಅನೇಕ ಬಾರಿ ಸ್ಥಳೀಯರಿಂದ ಮನವಿ ಬಂದಿದ್ದು, ಮಹಾನಗರ ಪಾಲಿಕೆಯ ಪ್ರೌಢ ಶಾಲೆಯಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ, ಈ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, 8ನೇ ತರಗತಿಯಿಂದ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

Office of the ... Bangalore Mahanagara Palike
No. 1289/13-14
Date. 6/3/14.

7/3/14

ಪರಿಶೀಲಿಸಲಾಗಿ, ಪಾಲಿಕೆಯ ಬಾಲಕರ ಪ್ರೌಢ ಶಾಲೆ ಪಿಟ್‌ಕಾಲೋನಿ (ಶ್ರೀರಾಮಪುರ) ಹಾಗೂ ಪಾಲಿಕೆಯ ಪ್ರೌಢಶಾಲೆ, ಮಾರಪ್ಪನಪಾಳ್ಯಗಳಲ್ಲಿ ಕನ್ನಡ ಮಾಧ್ಯಮ ತರಗತಿಗಳು ಸುಮಾರು ವರ್ಷದಿಂದ ನಡೆಯುತ್ತಿದ್ದು, ಇತ್ತೀಚೆಗೆ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸ್ಥಳೀಯ ನಾಗರೀಕರು ಆಂಗ್ಲ ಮಾಧ್ಯಮದ ಕಡೆಗೆ ಒಲವು ತೋರಿಸುತ್ತಿರುವುದರಿಂದ ಹಾಗೂ ಮೇಲ್ಕಂಡಂತೆ ನಗರ ಪಾಲಿಕೆ ಸದಸ್ಯರುಗಳು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಮೇಲ್ಕಂಡ ಎರಡು ಪ್ರೌಢಶಾಲೆಗಳಲ್ಲಿ 2014-15ನೇ ಸಾಲಿನಿಂದ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಲು ಅನುಮತಿ ಕೋರಿ ವಿಶೇಷ ಆಯುಕ್ತರು (ಯೋಜನೆ) ರವರ ಪತ್ರದ ಸಂಖ್ಯೆ:ವಿದ್ಯಾ/ವಿಪ-2/ಪಿಆರ್/28/13-14, ದಿನಾಂಕ:04.02.2014ರಲ್ಲಿರುವಂತೆ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ:</u>

**2014-15ನೇ ಸಾಲಿನಿಂದ ಎಂಟನೆಯ ತರಗತಿಯ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸುತ್ತಾ, 2015-16 ಮತ್ತು 2016-17ನೇ ಸಾಲಿನಿಂದ ಅನುಕ್ರಮವಾಗಿ ಒಂಭತ್ತೆಯ ಮತ್ತು ಹತ್ತನೆಯ ತರಗತಿಗಳನ್ನು ಪ್ರಾರಂಭಿಸುವಂತೆ ನಿರ್ಣಯಿಸಿ, ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:04.02.2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

ಮೇಲ್ಕಂಡ ಚರ್ಚೆಯನ್ನು ಪೂರ್ಣಗೊಳಿಸಿ, ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯ್ತು.

ಎ.ಕೋದಂಡ ರೆಡ್ಡಿ,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತ ರವರ ಅವಗಾಹನೆಗೆ ತರಲು ಕೋರಿದೆ.
5) ವಿಶೇಷ ಆಯುಕ್ತರು(ಯೋಜನೆ)ರವರ ಅವಗಾಹನೆಗೆ ಕಳುಹಿಸಿದೆ.
6) ಅಪರ ಆಯುಕ್ತರು (ಕಲ್ಯಾಣ)ರವರ ಅವಗಾಹನೆಗೆ ಕಳುಹಿಸಿದೆ.
7) ಸಾರ್ವಜನಿಕ ಸಂಪರ್ಕಾಧಿಕಾರಿ/ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
9) ಕಛೇರಿ ಕಡತಕ್ಕೆ.